ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬೃ.ಬೆಂ.ಮ.ಪಾ/ಕಾ.ಪಾ.ಅ (ವಿ)/ಯ.ವ/ತಾಂ.ಮ/ 07 /23-24,

ಕಾರ್ಯಪಾಲಕ ಅಭಿಯಂತರು(ವಿದ್ಯುತ್)ರವರ ಕಛೇರಿ
ಬೃ.ಬೆಂ.ಮ.ಪಾ, ಯಲಹಂಕ ವಲಯ
ಬಳ್ಳಾರಿ ರಸ್ತೆ, ಬೆಂಗಳೂರು-92.
ದಿನಾಂಕ: 02-02-2024

ತಾಂತ್ರಿಕ ಮಂಜೂರಾತಿ

ವಿಷಯ:- Shifting of existing High Masts to road side and trencless cabling work in Yelahanka Division.

ಉಲ್ಲೇಖ:- 1. ಮಾನ್ಯ ಆಯುಕ್ತರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ: ಬಿ12(1)/ಪಿ.ಆರ್/394/20-21, ದಿನಾಂಕ:04-02-2021 ರ ಮೇರೆಗೆ

2. ಅಂದಾಜು ಮೊತ್ತ: ರೂ.6.00 ಲಕ್ಷಗಳು

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಯಲಹಂಕ ವಲಯರವರು ಈ ಕೆಳಗಿನ ಕಾಮಗಾರಿಗೆ 2023-24 ನೇ ಸಾಲಿನ ಅಯವ್ಯಯದ ಲೆಕ್ಕ ಶಿರ್ಷಿಕೆ-**P0486** ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಯಲಹಂಕ ವಲಯ ವಿದ್ಯುತ್ ವಿಭಾಗದ ಪಿ.ಓ.ಡಬ್ಲ್ಯೂ ಅನುದಾನದಡಿಯಲ್ಲಿ ಯಲಹಂಕ ವಿಭಾಗದಲ್ಲಿ ಭೂಗತ ಕೇಬಲ್‌ಗಳನ್ನು ಅಳವಡಿಸುವ ಕಾಮಗಾರಿಗಾಗಿ ಚಾಲ್ತಿಯಲ್ಲಿರುವ ಹೈಮಾಸ್ಟ್‌ಗಳನ್ನು ರಸ್ತೆಯ ಪಕ್ಕಕ್ಕೆ ಸ್ಥಳಾಂತರಿಸುವ ಕಾಮಗಾರಿಗೆ ಕೆ.ಪಿ.ಡಬ್ಲ್ಯುಡಿ. 2023-24 ವಿದ್ಯುತ್ (ಎಸ್.ಆರ್) ದರಗಳ ಹಾಗೂ ಅನುಮೋದಿತ ದರಗಳ ಅನ್ವಯ ಅಂದಾಜು ಪಟ್ಟಿಯನ್ನು ತಯಾರಿಸಿದೆ. ಮಾನ್ಯ ಮುಖ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರು 2023-24 ನೇ ಸಾಲಿನ ವಿದ್ಯುತ್ ಕ್ರಿಯಾ ಯೋಜನೆಯನ್ನು ಸದರಿ ಕಾಮಗಾರಿಯನ್ನು **"ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ನಡವಳಿಗಳು ವಿಷಯದ ಸಂಖ್ಯೆ:121/2023-24, ದಿನಾಂಕ:02.12.2023"** ರಲ್ಲಿ ಅನುಮೋದಿಸಿರುವ ಮೇರೆಗೆ ತಮ್ಮ ಅವಗಾಹನೆಗೆ ತರುತ್ತಾ, ಮಾನ್ಯ ಆಯುಕ್ತರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಉಲ್ಲೇಖ (01) ರಂತೆ ನೀಡಿರುವ ಅಧಿಕಾರದನ್ವಯ ಆಡಳಿತಾತ್ಮಕ ಮಂಜೂರಾತಿಯ ಅನುಮೋದನೆ ನೀಡಿದೆ.

ಆಡಳಿತಾತ್ಮಕ ಅನುಮೋದನೆ ನೀಡಿರುವುದರಿಂದ ಸದರಿ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಹಾಗೂ ತಾಂತ್ರಿಕ ಮಂಜೂರಾತಿಯ ಪುಟ ಸಂಖ್ಯೆ:~~126~~127 ಕ್ರ.ಸಂ.~~06~~07 ರಲ್ಲಿ ಈ ಕೆಳಗಿನ ಷರತ್ತುಗಳಂತೆ ದಾಖಲಿಸಲಾಗಿದೆ.

ಷರತ್ತುಗಳು:

1. ಅಂದಾಜು ಪಟ್ಟಿಯ ಮೊತ್ತ ರೂ.1.00 ಲಕ್ಷಗಳಿಗೆ ಮೀರಿದ ಕಾಮಗಾರಿಗಳಿಗೆ ಟೆಂಡರ್ ಕರೆಯುವುದು.
2. ಲಾಗ್ ಪುಸ್ತಕದಲ್ಲಿ ಗುತ್ತಿಗೆದಾರರು ನಿರ್ವಹಿಸಿದ ಕಾರ್ಯ ಚಟುವಟಿಕೆಗಳ ಬಗ್ಗೆ ದಾಖಲೆ ರೂಪದಲ್ಲಿ ನಮೂದಿಸಿಕೊಳ್ಳುವುದು.
3. ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡ್ಯಾಟಾ ದರವನ್ನು ತಯಾರಿಸಿ, ಅನುಮೋದನೆ ಪಡೆಯುವುದು.
4. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಷನ್ ಕರೆದು ಅನುಮೋದನೆ ಪಡೆಯುವುದು.
5. ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನದಡಿಯಲ್ಲಿ ಭರಿಸುವುದು.

ಕಾರ್ಯಪಾಲಕ ಅಭಿಯಂತರರು (ವಿದ್ಯುತ್)
ಬಿಬಿಎಂಪಿ, ಯಲಹಂಕ ವಲಯ

ಪ್ರತಿಯನ್ನು: 1. ಅಧೀಕ್ಷಕ ಅಭಿಯಂತರರು (ವಿದ್ಯುತ್) ರವರ ಮಾಹಿತಿಗಾಗಿ.

2. ಕಛೇರಿ ಕಡತಕ್ಕೆ.

Scanned with OKEN Scanner